ಅ) ಚಿಕ್ಕಮಗಳೂರು ನಗರದ ಐ.ಡಿ.ಎಸ್.ಜಿ. ಸರ್ಕಾರಿ ಕಾಲೇಜಿನಲ್ಲಿ ಒಟ್ಟು 22 ಉಪನ್ಯಾಸಕರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಉಪನ್ಯಾಸಕರ ಹುದ್ದೆಗಳು ಎಷ್ಟು ವರ್ಷಗಳಿಂದ ಖಾಲಿ ಇದೆ, ಹಾಗೂ ಒಟ್ಟು ಇರಬೇಕಾದಂತಹ ಉಪನ್ಯಾಸಕರ ಸಂಖ್ಯೆ ಎಷ್ಟು;

ಇ) ಈ ಹುದ್ದೆಗಳನ್ನು ಭರ್ತಿ ಮಾಡುವ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು ಹಾಗೂ ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು?

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಬಂದಿದೆ.

ಆ) ಸದರಿ ಹುದ್ದೆಗಳು ಸುಮಾರು 20 ವರ್ಷಗಳಿಂದ ಖಾಲಿ ಇವೆ. ಕಾಲೇಜಿನಲ್ಲಿ ಇರಬೇಕಾದ ಒಟ್ಟು ಉಪನ್ಯಾಸಕರ ಸಂಖ್ಯೆ : 65.

ಇ) ಕರ್ನಾಟಕ ಲೋಕಸೇವಾ ಆಯೋಗದಿಂದ ಇತ್ತೀಚೆಗೆ ಆಯ್ಕೆಯಾದ ಅಭ್ಯರ್ಥಿಗಳಿಂದ 13 ಮಂದಿಯನ್ನು ತುಂಬಲು ಈಗಾಗಲೇ ಕ್ರಮ ತೆಗೆದುಕೊಳ್ಳಲಾಗಿತ್ತಿದೆ. ಉಳಿದ ಹುದ್ದೆಗಳನ್ನು ತುಂಬುವ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಮಾನ್ಯ ಅಧ್ಯಕ್ಷರೇ, ನಮ್ಮಲ್ಲಿ ಸರ್ಕಾರಿ ಕಾಲೇಜು ಇದ್ದು ಉಪನ್ಯಾಸಕರ ಕೊರತೆ ಎರಡು-ಮೂರು ವರ್ಷಗಳಿಂದ ಇದೆ ಎಂದು ಹೇಳಿದ್ದಾರೆ. ಜೊತೆಗೆ ಎಷ್ಟು ಹುದ್ದೆಗಳು ಖಾಲಿ ಇವೆ ಎಂದು ಕೇಳಿದ್ದಕ್ಕೆ 65 ಹುದ್ದೆಗಳು ಖಾಲಿ ಇವೆ ಎಂದು ಹೇಳುತ್ತಾರೆ. ಸರ್ಕಾರದ ನೀತಿಯ ಪ್ರಕಾರ ಆರೆಕಾಲಿಕ 960 ಶಿಕ್ಷಕರನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಹೇಳಿದರು. ಅವರ ಕಥೆ ಏನಾಯಿತು ಎಂಬುದು ನಮಗೆ ಗೊತ್ತಿಲ್ಲ. ಈ ಹುದ್ದೆಗಳು ಎರಡು-ಮೂರು ವರ್ಷಗಳಿಂದ ಖಾಲಿ ಇದ್ದು ಇವುಗಳನ್ನು ತುಂಬುವುದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂಬುದೂ ಸಹ ಗೊತ್ತಿಲ್ಲ. ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ತಮ್ಮ ಮುಖಾಂತರವಾಗಿ ಅವರಿಗೆ ನಾನು ಪ್ರಶ್ನೆ ಕೇಳುತ್ತಿದ್ದೇನೆ ಅವರ ಭವಿಷ್ಯ ಹೇಗೆ ಮುಂದುವರಿಯಬೇಕು ಎನ್ನುವುದರ ಬಗ್ಗೆ ಅವರು ಉತ್ತರ ಕೊಡಬೇಕಾಗುತ್ತದೆ.

ಅಧ್ಯಕ್ಷರು :- ಭವಿಷ್ಯ ಚೆನ್ನಾಗಿಲ್ಲದೇ ಹೋದರೆ ನಿಮ್ಮ ಮೇಲೆ ಎಲೆಕ್ಷನ್‌ಗೆ ನಿಂತು ಅಸೆಂಬ್ಲಿಗೆ ಆರಿಸಿಬರುತ್ತಾರೆ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಆ ಪರಿಣಾಮವಂತೂ ಬಿದ್ದೇ ಬೀಳುತ್ತದೆ.

ವಿಷಯ :- ಅರಕಲಗೂಡು ತಾಲ್ಲೂಕಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 200 (438)

ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಅರಕಲಗೂಡು ತಾಲ್ಲೂಕು ಕೊಣನೂರು ಮತ್ತು ಅರಕಲಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಉಪನ್ಯಾಸಕರ ಕೊರತೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಗ್ರಾಮಾಂತರ ಪ್ರದೇಶದ ಮೇಲ್ಕಂಡ ಕಾಲೇಜುಗಳಿಗೆ ಉಪನ್ಯಾಸಕರುಗಳನ್ನು ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ;

ಶ್ರೀ ಬಿ. ಸೋಮಶೇಖರ್ (ಉನ್ನತ ಶಿಕ್ಷಣ ಸಚಿವರು) :-

ಅ) ಬಂದಿದೆ.

ಆ) 1) ಕೊಣನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ 10 ಹುದ್ದೆಗಳು ಖಾಲಿ ಇದ್ದು ಇವುಗಳ ಪೈಕಿ 07 ಹುದ್ದೆಗಳನ್ನು ಇತ್ತೀಚೆಗೆ ಕರ್ನಾಟಕ ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳಿಂದ ತುಂಬಲಾಗಿದೆ. ಉಳಿದ ಹುದ್ದೆಗಳನ್ನು ತುಂಬಲು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

2) ಅರಕಲಗೂಡು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಖಾಲಿಯಿರುವ ಎಲ್ಲಾ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಅಭ್ಯರ್ಥಿಗಳಿಂದ ತುಂಬಲಾಗಿದೆ.

+ **ಶ್ರೀ ಎ. ಟಿ. ರಾಮಸ್ವಾಮಿ :-** ಮಾನ್ಯ ಅಧ್ಯಕ್ಷರೇ, ಉತ್ತರಗಳನ್ನು ಒದಗಿಸಿದ್ದಾರೆ. ಆ ಉತ್ತರ ಸಮರ್ಪಕವಾಗಿಲ್ಲ ಎನ್ನುವಂಥದ್ದು ನನ್ನ ಅಭಿಪ್ರಾಯ. ಈಗ ಕೊಣನೂರು ಪ್ರಥಮ ದರ್ಜೆ ಕಾಲೇಜಿನಲ್ಲಿ ಹತ್ತು ಹುದ್ದೆಗಳು ಮಾತ್ರ ಖಾಲಿ ಇವೆ ಎನ್ನುವ ಮಾತನ್ನು ಹೇಳಿದ್ದಾರೆ. ಆ ಪೈಕಿ 7 ಹುದ್ದೆಗಳನ್ನು ತುಂಬಿದ್ದೇವೆ ಎನ್ನುವ ಮಾತನ್ನೂ ಕೂಡ ಹೇಳಿದ್ದಾರೆ. ಈಗ ಆ ಕಾಲೇಜಿನಲ್ಲಿ ಒಟ್ಟು ಎಷ್ಟು ಉಪನ್ಯಾಸಕರ ಹುದ್ದೆಗಳು ಈಗ ಖಾಲಿ ಇದ್ದಾವೆ? ಒಟ್ಟು ಹುದ್ದೆಗಳಲ್ಲಿ ಎಷ್ಟು ಉಪನ್ಯಾಸಕರುಗಳು ಈಗ ಹಾಲಿ ಕೆಲಸ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಬೇಕು. ಏಕೆಂದರೆ ಕಳೆದ ವರ್ಷ ಇದೇ ಸಮಸ್ಯೆ ಇದ್ದಾಗ ನಾನು ಪ್ರಶ್ನೆ ಕೇಳಿದಾಗ 14 ಉಪನ್ಯಾಸಕರನ್ನು ಆ ಕಾಲೇಜಿನಿಂದ ಹೊರಗೆ ವರ್ಗ ಮಾಡಿದ್ದರು. ಒಬ್ಬರನ್ನೂ ಕೂಡ ಭರ್ತಿ ಮಾಡಿರಲಿಲ್ಲ. ಆಮೇ 14 ಖಾಲಿ ಉಳಿದುಕೊಂಡಿದ್ದವು. ಆದರ ಜೊತೆಗೆ ಇನ್ನಷ್ಟು ಖಾಲಿ ಇದ್ದವು. ನಿಮ್ಮ ಉತ್ತರದಲ್ಲಿ 10 ಖಾಲಿ ಇತ್ತು, 7 ಜನರನ್ನು ತುಂಬಿದ್ದೇವೆ ಎನ್ನುವ ಮಾತನ್ನು ಹೇಳಿದ್ದೀರಿ. ಆದಕ್ಕೆ ನಾನು ಹೇಳಿದ್ದು ಈ ಉತ್ತರ ಸರಿ ಇಲ್ಲ ಎಂದು. ಮತ್ತೆ ಏಳು ಜನರನ್ನು ಏನು ತುಂಬಿದ್ದೀರಿ, ಆದರಲ್ಲಿ ಒಬ್ಬರೇ ಒಬ್ಬರು ಫಿಸಿಕ್ಸ್ ಲೆಕ್ಚರರ್ ಬಂದು ರಿಪೋರ್ಟ್ ಮಾಡಿಕೊಂಡರು. ರಿಪೋರ್ಟ್ ಮಾಡಿಕೊಂಡ ಮೇಲೆ ಆ ಕಾಲೇಜಿಗೆ ಬಂದೇ ಇಲ್ಲ. ಅದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ತಾವು ದಯಮಾಡಿ ತಿಳಿಸಬೇಕು.

+ **ಶ್ರೀ ಬಿ. ಸೋಮಶೇಖರ್ :-** ಮಾನ್ಯ ಅಧ್ಯಕ್ಷರೇ, ಈ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇಂಗ್ಲೀಷ್ (1) ಹುದ್ದೆ, ಕನ್ನಡ (1), ಅರ್ಥಶಾಸ್ತ್ರ (1) ಹುದ್ದೆ, ವಾಣಿಜ್ಯ ಶಾಸ್ತ್ರ (1) ಹುದ್ದೆ ಇದೆ. ಕೊಣನೂರಿನಲ್ಲಿ ಇಂಗ್ಲೀಷ್ (1) ಹುದ್ದೆ, ಕನ್ನಡ (1) ಹುದ್ದೆಗಳು, ಇತಿಹಾಸ (1), ಅರ್ಥಶಾಸ್ತ್ರ (1) ಮತ್ತು ರಾಜ್ಯ ಶಾಸ್ತ್ರ (1) ವಾಣಿಜ್ಯ ಶಾಸ್ತ್ರ (2) ಮತ್ತು ಭೌತಶಾಸ್ತ್ರ (1) ಇಷ್ಟು ಹುದ್ದೆಗಳು ಖಾಲಿ ಇವೆ. ಈಗಾಗಲೇ ಇಂಗ್ಲೀಷ್ ಹುದ್ದೆಯನ್ನು ತುಂಬುತ್ತಿದ್ದೇವೆ. ಈ ಲೋಕಸೇವಾ ಆಯೋಗದಿಂದ ಸುಮಾರು 664 ಉಪಾಧ್ಯಾಯರುಗಳಿಗೆ ನಾವು ಈಗಾಗಲೇ ಪೋಸ್ಟಿಂಗ್ಸ್ ಕೊಡುತ್ತಿರುವುದರಿಂದ ಆದನ್ನು ತುಂಬುತ್ತಿದ್ದೇವೆ. ಮತ್ತು ಇನ್ನು ಕೆಲವು ಸ್ಟೂಡೆಂಟ್ಸ್ ಸ್ಟ್ರೆಂಗ್ತ್ ಜಾಸ್ತಿ ಇದ್ದರೂ ಅವರನ್ನು ರೇಷಿಯೋ ಪ್ರಕಾರ ಹೊಸದಾಗಿ ಸೃಷ್ಟಿ ಮಾಡಬೇಕಾಗುತ್ತದೆ. ಆದರ ಬಗ್ಗೆಯೂ ನಾವು ಈಗ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ಮತ್ತು ಈಗ ಖಾಯಂ ಆಗಿ ನಾವು 1494 ಅರೆಕಾಲಿಕ ಉಪನ್ಯಾಸಕರನ್ನು ಖಾಯಂ ಮಾಡಬೇಕು ಎಂದು ಹೇಳಿ ತಾತ್ಪಿಕವಾಗಿ ತೆಗೆದುಕೊಂಡಿದ್ದೇವೆ ಮತ್ತು ಲೋಕಸೇವಾ ಆಯೋಗದಿಂದ 604 ಹುದ್ದೆಗಳು ಮತ್ತು ಸ್ಟಾಫ್ ಗ್ಯಾಪ್ ಉಪನ್ಯಾಸಕರನ್ನು ತುಂಬುವ ಕಾರ್ಯಕ್ರಮವನ್ನು ಮಾಡುತ್ತಿದ್ದೇವೆ. ಆದಷ್ಟು ಬೇಗ ಈ ಒಂದು ಹುದ್ದೆಗಳು ಖಾಲಿ ಇರುವುದನ್ನು ತುಂಬುವುದಕ್ಕೆ ಸರ್ಕಾರ ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ ಎನ್ನುವ ವಿಚಾರವನ್ನು ತಮಗೆ ಹೇಳುತ್ತೇನೆ.

+ **ಶ್ರೀ ಎ. ಟಿ. ರಾಮಸ್ವಾಮಿ :-** ಮಾನ್ಯ ಅಧ್ಯಕ್ಷರೇ, ನಮ್ಮ ಕೊಣನೂರು ಪ್ರಥಮ ದರ್ಜೆ ಸರ್ಕಾರಿ ಕಾಲೇಜಿನಲ್ಲಿ ಈಗ ಸುಮಾರು 15 ದಿವಸಗಳಿಂದ ಈಚೆಗೆ ಅಲ್ಲಿ ಪ್ರಿನ್ಸಿಪಾಲರೇ ನೋಟೀಸ್ ಬೋರ್ಡ್‌ಗೆ ಹಾಕಿದ್ದಾರೆ. ವಿಜ್ಞಾನ ಮತ್ತು ವಾಣಿಜ್ಯ ವಿಭಾಗದಲ್ಲಿ ಉಪನ್ಯಾಸಕರ ಕೊರತೆ ಇದೆ. ಅವರು ಇಲ್ಲ. ಆದ್ದರಿಂದ ಪೋಷಕರು ಮತ್ತು ವಿದ್ಯಾರ್ಥಿಗಳು ಆ ವಿಭಾಗಕ್ಕೆ ಸೇರಿಕೊಳ್ಳಬಾರದು ಎಂದು ಹೇಳಿ ನೋಟೀಸ್ ಬೋರ್ಡ್‌ಗೆ ಅವರೇ ಸೈನ್ ಹಾಕಿ ಹಾಕಿದ್ದಾರೆ. ಇದು ನಾಚಿಕೆಗೇಡು. ನಾನು ಕಳೆದ ವರ್ಷದಿಂದಲೂ ಕೂಡ ನಿಮ್ಮನ್ನು ಒತ್ತಾಯ ಮಾಡಿಕೊಂಡು ಬಂದಿದ್ದೇನೆ. ನಮ್ಮ ನಂಜಪ್ಪ ನವರಿಗೆ ಗೊತ್ತು, ಅವರು ಉಸ್ತುವಾರಿ ಮಂತ್ರಿಗಳಾಗಿದ್ದರು. ಅವರ ಗಮನಕ್ಕೂ ಕೂಡ ತಂದಿದ್ದರು. ನಮ್ಮ ಕೊಣನೂರು ಕಾಲೇಜನಲ್ಲಿ 14 ಜನ ಶಿಕ್ಷಕರನ್ನು ಹೊರಗಡೆಗೆ ವರ್ಗಮಾಡಿದ್ದು. ಇಲ್ಲಿಯವರೆಗೆ ಒಬ್ಬರನ್ನೂ ಕೂಡ ಭರ್ತಿ ಮಾಡಿಲ್ಲ. ಇವತ್ತು ಪ್ರಿನ್ಸಿಪಾಲರೇ ನೋಟೀಸ್ ಬೋರ್ಡ್‌ಗೆ ಹಾಕಿದ್ದಾರೆ. ಸೈನ್ಸ್ ವಿಭಾಗಕ್ಕೆ ಮತ್ತು ವಾಣಿಜ್ಯ ವಿಭಾಗಕ್ಕೆ ಒಬ್ಬರೂ ಕೂಡ ಉಪನ್ಯಾಸಕರು ಇಲ್ಲ. ಆದರಿಂದ ನೀವು ಸೇರಿಸಬೇಕಾದರೆ ನೋಡಿ ಸೇರಿಸಿ ಎಂದು ಹೇಳಿ ನೋಟೀಸ್ ಬೋರ್ಡ್‌ಗೆ ಹಾಕಿದ್ದಾರೆ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಅಧ್ಯಕ್ಷರೇ, ಸರ್ಕಾರಿ ಪ್ರಾಂಶುಪಾಲರು ಏನು ನೋಟೀಸ್ ಬೋರ್ಡ್‌ನಲ್ಲಿ ಹಾಕಿದ್ದಾರೆ, ಅದು ಬಹಳ ತಪ್ಪು. ಈಗಾಗಲೇ ನಾನು ನಮ್ಮ ನಿರ್ದೇಶಕರಿಗೆ ನಿರ್ದೇಶನವನ್ನು ಕೊಟ್ಟಿದ್ದೇನೆ. ಅವರ ಬಗ್ಗೆ ಒಂದು ಸಮಜಾಯಿಷಿ ಯನ್ನು ಕೇಳಿ ಶಿಸ್ತಿನ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಹೇಳಿದ್ದೇನೆ. ಆದರ ಬಗ್ಗೆ ನಾನು ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ಆಕ್ಕಿ ಚೆನ್ನಾಗಿಲ್ಲ ಎಂದು ತೋರಿಸಿದರೆ ಡೀಲರ್‌ಶಿಪ್ ಕ್ಯಾನ್ಸಲ್ ಮಾಡಿದಿರಿ. ಇದೂ ಅದೇ ರೀತಿ ಆಗುತ್ತದೆ.

(ಗೊಂದಲ)

ಶ್ರೀ ಬಿ. ಸೋಮಶೇಖರ್ :- ಮಾನ್ಯ ಸಭಾಧ್ಯಕ್ಷರೇ, ಯಾವುದೇ ಸರ್ಕಾರೀ ಪ್ರಾಂಶುಪಾಲರು ತಮಗೆ ಇರತಕ್ಕ ಒಂದು ತೊಂದರೆಯನ್ನು ಅವರ ಒಂದು ಉನ್ನತ ಅಧಿಕಾರಿಗಳಿಗೆ ಹೇಳಬೇಕೇ ಹೊರತು ಅದನ್ನು ಪಬ್ಲಿಕ್ ಇಷ್ಯೂ ಮಾಡತಕ್ಕಂಥಹ ಜವಾಬ್ದಾರಿ ಅವರದ್ದಲ್ಲ. ಅದು ಅವರ ಕೆಲಸ ಅಲ್ಲ.

ಶ್ರೀ ಅರಗ ಜ್ಞಾನೇಂದ್ರ :- ಗುಟ್ಟದಲ್ಲಿ ಇಟ್ಟುಕೊಂಡು ಮಕ್ಕಳ ಭವಿಷ್ಯ ಹಾಳು ಮಾಡಬೇಕೇ?

ಅಧ್ಯಕ್ಷರು :- ಮಾನ್ಯ ಮಂತ್ರಿಗಳು ಹೇಳತಕ್ಕ ಅರ್ಥ ಏನೆಂದರೆ ಪ್ರಿನ್ಸಿಪಾಲರು ಅವರಿಗೆ ಸ್ಟಾಫ್‌ನ ಕೊರತೆ ಇದ್ದರೆ ಸರ್ಕಾರಕ್ಕೆ ಬರೆದು ಸ್ಟಾಫ್ ಕೊಡಿ ಎಂದು ಹೇಳಬೇಕೇ ಹೊರತು ಮಕ್ಕಳನ್ನು ಅಡ್ಜಿಟ್ ಮಾಡಬೇಡಿ ಎಂದು ಹೇಳುವ ಅಧಿಕಾರವನ್ನು ಪ್ರಿನ್ಸಿಪಾಲರಿಗೆ ಕೊಟ್ಟಿಲ್ಲ. He can not go beyond his limits and act ಎನ್ನತಕ್ಕದ್ದು. ಅದೇ ಅಲ್ಲವೇ ನಿಮ್ಮ ಅಭಿಪ್ರಾಯ?

ಶ್ರೀ ಬಿ. ಸೋಮಶೇಖರ್ :- ಅದೇ ನನ್ನ ಅಭಿಪ್ರಾಯ.

ಶ್ರೀ ಬಿ. ಎಸ್ ಯಡಿಯೂರಪ್ಪ :- ಮೂಲ ಪ್ರಶ್ನೆ ಇದಲ್ಲ. ಇವತ್ತು ಬಹುತೇಕ ಕಾಲೇಜುಗಳಲ್ಲಿ ಲೆಕ್ಚರರ್ಸ್ ಇಲ್ಲ. ವಿದ್ಯಾವಂತರು ಇದ್ದಾರೆ. ಆಸ್ಪತ್ರೆಯಲ್ಲಿ ಡಾಕ್ಟರ್ ಇಲ್ಲ, ಕಾಲೇಜಿನಲ್ಲಿ ಲೆಕ್ಚರರ್ಸ್ ಇಲ್ಲ. ಬೆಂಗಳೂರು ಮಹಾನಗರದಲ್ಲಿ ಒಬ್ಬರು ಲೆಕ್ಚರರ್ಸ್ ಇಲ್ಲದೇ ಒಂದು ದಿವಸ ಕಾಲೇಜು ನಡೆಸಿ ನೋಡೋಣ. ಗ್ರಾಮೀಣ ಪ್ರದೇಶದಲ್ಲಿ, ತಾಲ್ಲೂಕು ಕೇಂದ್ರಗಳಲ್ಲಿ ಈ ರೀತಿ ಶಿಕ್ಷಕರು ಇಲ್ಲದೇ ಆ ಕ್ಲಾಸ್‌ಗಳೇ ಪ್ರಾರಂಭ ಆಗಿಲ್ಲ. ಆವಾಗ ಮಕ್ಕಳ ಭವಿಷ್ಯ ಏನು? ಅದಕ್ಕಾಗಿ ಯಾರೋ ಒಬ್ಬ ಪ್ರಿನ್ಸಿಪಾಲರು ಅಲ್ಲಿರುವ ಸಮಿತಿಯವರು ಹೆದರಿಸಿ ಗಲಾಟೆ ಮಾಡಿದ ಮೇಲೆ ಅಪ್ಪ ನಮ್ಮಲ್ಲಿ ಯಾರೋ ಮೇಷ್ಟು ಇಲ್ಲ, ನಾವು ಶಾಲೆ ಪ್ರಾರಂಭ ಮಾಡುತ್ತೇವೋ ಇಲ್ಲವೋ ಗೊತ್ತಿಲ್ಲ ಎಂದು ನೋಟೀಸ್ ಬೋರ್ಡ್‌ನಲ್ಲಿ ಹಾಕಿದರೆ ತಕ್ಷಣ ಅಲ್ಲಿ ಶಿಕ್ಷಕರನ್ನು ನೇಮಕ ಮಾಡಬೇಕೇ ಹೊರತು ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದರೆ ಪಾಪ ಅವರೇನು ಅಪರಾಧ ಮಾಡಿದ್ದಾರೆ?

ಅಧ್ಯಕ್ಷರು :- ಅಪರಾಧ ಮಾಡಿಲ್ಲ. ಪ್ರಿನ್ಸಿಪಾಲರಾದವರು ಸರ್ಕಾರೀ ನೌಕರರು. ಶಿಕ್ಷಕರ ಕೊರತೆ ಇದೆ ತುಂಬಿಸಿ ಕೊಡಿ ಎಂದು ಹೇಳಿ ಮೇಲಿಂದ ಮೇಲೆ ಸರ್ಕಾರಕ್ಕೆ ಒತ್ತಡ ತರಬೇಕೇ ಹೊರತು ....

ಶ್ರೀ ಬಿ. ಎಸ್. ಯಡಿಯೂರಪ್ಪ :- ಹತ್ತು ಸಾವಿರ ಬರೆದಿದ್ದಾರೆ.

ಅಧ್ಯಕ್ಷರು :- ಜವಾಬ್ದಾರಿಯುತವಾದ ಕೆಲಸವನ್ನು ನಿರ್ವಹಣೆ ಮಾಡುತ್ತಿರುವ ಪ್ರಿನ್ಸಿಪಾಲರು ಮಕ್ಕಳನ್ನು ಇಲ್ಲಿ ಸೇರಿಸಬೇಡಿ ಎಂದು ನೋಟಿಫಿಕೇಷನ್ ಹಾಕುವುದಕ್ಕೆ he has no power.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ :- ಪ್ರಿನ್ಸಿಪಾಲರಿಗೆ ಕಷ್ಟ ಇದೆ, ನನ್ನ ಕ್ಷೇತ್ರದಲ್ಲಿ ಅವರಿಗೆ ಜನ ಹೊಡೆಯಲಿಕ್ಕೆ ಹೋಗಿದ್ದಾರೆ.

(ಗೊಂದಲ)

ಶ್ರೀ ಕೆ. ವಿಶ್ವೇಶ್ವರ ಹೆಗಡೆ :- ಸದುದ್ದೇಶದಿಂದ ಹೇಳಿದ್ದಾರೆ.

ಶ್ರೀ ಬಿ.ಸೋಮಶೇಖರ್ :- ಅವರ ವ್ಯಾಪ್ತಿ ಮೀರಿ ಹೇಳಬಾರದು.

ಅಧ್ಯಕ್ಷರು :- ಉದ್ದೇಶ ಒಳ್ಳೆಯದು ಕೆಟ್ಟದ್ದು ಅಲ್ಲ.

ಶ್ರೀ ಬಿ. ಸೋಮಶೇಖರ್ :- ಮಾನ್ಯ ಸಭಾಧ್ಯಕ್ಷರೇ, ಸದುದ್ದೇಶ ಇರಬಹುದು. ಆದರೆ ಸರ್ಕಾರಿ ನೌಕರರಿಗೆ ಒಂದು ಇತಿ ಮಿತಿ ಇದೆ, ಯಾರೇ ಆದರೂ ಆ ಇತಿ ಮಿತಿ ಬಿಟ್ಟು ಹೋಗಬಾರದು.

ಶ್ರೀ ಕಾಗೋಡು ತಿಮ್ಮಪ್ಪ :- ಅವರು ಅನೇಕ ಸಾರಿ ತಿಳಿಸಿದ್ದಾರೆ. ಒಳ್ಳೆಯ ಉದ್ದೇಶದಿಂದ ತಿಳಿಸಿದ್ದಾರೆ.

ಶ್ರೀ ಬಿ. ಸೋಮಶೇಖರ್ :- ಉದ್ದೇಶ ಇರಬಹುದು, ಆದರೆ ಅದಕ್ಕೆ ವಿಧಾನ ಇದೆ.

(ಗೊಂದಲ)

ಶ್ರೀ ಎ.ಟಿ. ರಾಮಸ್ವಾಮಿ :- ಅನಿವಾರ್ಯ ಬಂದಾಗ ಮಾಡಿರುತ್ತಾರೆ.

ಶ್ರೀ ಬಿ. ಸೋಮಶೇಖರ್ :- ಅನಿವಾರ್ಯ ಬಂದಾಗ ಸರ್ಕಾರೀ ನೌಕರರು ಭಾಷಣ ಮಾಡುವುದಕ್ಕೆ ಆಗುವುದಿಲ್ಲ.

ಶ್ರೀ ಜಿ. ಚಂದ್ರಕಾಂತ ಬೆಲ್ಲದ :- ಶಾಸಕರಿಗೆ ರಕ್ಷಣೆ ಕೊಡುವುದಕ್ಕೆ ಆಗುತ್ತಾ ಇಲ್ಲ. ಇನ್ನು ಪ್ರಿನ್ಸಿಪಾಲರಿಗೆ ಶಿಕ್ಷಕರಿಗೆ ಏನು ಕೊಡುತ್ತಾರೆ?

(ಗೊಂದಲ)

ಶ್ರೀ ಎ. ಟಿ. ರಾಮಸ್ವಾಮಿ :- ನಾನು ಮೊದಲೇ ಹೇಳಿದೆ. ಈಗ ಇಲ್ಲಿ ಬರೀ ಹತ್ತು ಹುದ್ದೆಗಳು ಖಾಲಿ ಇವೆ ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಈ ಉತ್ತರ ಸರಿಯಾಗಿಲ್ಲ ಎನ್ನತಕ್ಕ ಮಾತನ್ನು ಹೇಳಿದೆ. ಕಳೆದ ಸಾರಿ 15 ಉಪನ್ಯಾಸಕರನ್ನು ಹೊರಗಡೆ ವರ್ಗ ಮಾಡಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ :- ನನಗೆ ಗೊತ್ತಾಯಿತು. ಆ ಪ್ರಿನ್ಸಿಪಾಲರನ್ನು ಸಸ್ಪೆಂಡ್ ಮಾಡಿಸುತ್ತಿದ್ದೀರಿ. ನೀವೇ ಶಾಸಕರು; ನಿಮ್ಮ ಮೇಲೆ ಆ ಜನ ಕ್ರಮ ತೆಗೆದುಕೊಳ್ಳುವುದಕ್ಕೆ ನಾವೇನಾದರೂ ಕಾರ್ಯಕ್ರಮ ರೂಪಿಸಬೇಕು.

ಶ್ರೀ ಎ. ಟಿ. ರಾಮಸ್ವಾಮಿ :- ಪ್ರಿನ್ಸಿಪಾಲರು ವಾರಕ್ಕೆ ಎರಡೇ ದಿವಸ ಬರುವುದು.

ಅಧ್ಯಕ್ಷರು :- ಮಾನ್ಯ ಖರ್ಗೆಯವರು ಸುಮ್ಮನಿರಲಾರದೆ ಅವರಿಗೆ ಕ್ಲೂ ಕೊಟ್ಟು....

ಶ್ರೀ ಎ. ಟಿ. ರಾಮಸ್ವಾಮಿ :- ಪ್ರಿನ್ಸಿಪಾಲರದ್ದೂ ಲೋಪದೋಷ ಇದೆ, ಸರ್ಕಾರದ್ದೂ ಲೋಪದೋಷ ಇದೆ. ನಾನು ಸುಧಾರಣೆ ಮಾಡಿ, ಸರಿಪಡಿಸಿ ಎಂದು ಹೇಳುತ್ತಿದ್ದೇನೆ.

ಈಗ ಹತ್ತು ಉಪನ್ಯಾಸಕರ ಹುದ್ದೆ ಖಾಲಿ ಇದೆ ಎಂದು ಏನು ಹೇಳಿದ್ದಾರೆ, ಈ ಉತ್ತರ ಸರಿ ಇಲ್ಲ; ಕಳೆದ ಸಾರಿ ನಮ್ಮ ಕಾಲೇಜಿನಿಂದ 14 ಜನ ಉಪನ್ಯಾಸಕರನ್ನು ಹೊರಗಡೆಗೆ ವರ್ಗ ಮಾಡಿದರು. ಮಾನ್ಯ ನಂಜಪ್ಪನವರು ಇದ್ದಾರೆ ಕೇಳಿ ಅವರು ಉಸ್ತುವಾರಿ ಸಚಿವರು ಆಗಿದ್ದರು. ಒಬ್ಬರನ್ನೂ ಕೂಡ ಭರ್ತಿ ಮಾಡಲಿಲ್ಲ.

MR. SPEAKER :- Mr. Ramaswamy, in one word, shortage of teachers ನಿಂದ suffer ಆಗುತ್ತಿದೆ. ಇಷ್ಟು ಹೊತ್ತು ತೆಗೆದುಕೊಂಡರೆ ಹೇಗೆ, ಕ್ವೆಶ್ಚನ್ ಅವರ್ ನಡೆಸುವುದು ಕಷ್ಟ ಆಗುತ್ತದೆ.

ಶ್ರೀ ಬಿ. ಬಿ. ಶಿವಪ್ಪ :- ಸನ್ಮಾನ್ಯ ಅಧ್ಯಕ್ಷರೆ, ತಾವು ಮೊದಲೇ ಹೇಳಿದ್ದೀರಿ, ಹಾಸನದವರು ಬಹಳ ಗಲಾಟೆ ಮಾಡುತ್ತಾರೆ ಎಂದು. ನಾವು ಗಲಾಟೆ ಮಾಡುವವರಲ್ಲ.

ಅಧ್ಯಕ್ಷರು :- ನಿಮಗೆ ಏಕೆ ಈ ಕಾಲೇಜುಗಳಲ್ಲಿನ ಮೇಷ್ಟರ ಗಲಾಟೆ?

ಶ್ರೀ ಬಿ. ಬಿ. ಶಿವಪ್ಪನ :- ಮಾನ್ಯ ಮಂತ್ರಿಗಳ ಹತ್ತಿರ ನಿನ್ನೆ ಕೂಡ ಮಾತನಾಡಿದ್ದೇನೆ. ಸಕಲೇಶಪುರದಲ್ಲಿ ಒಂದು ಕಾಲೇಜು 1983 ರಲ್ಲಿ ಓಪನ್ ಮಾಡಿ ಇವತ್ತು 1996 ನೆಯ ಇಸವಿಯಲ್ಲಿ ಇದ್ದೇವೆ. ಇಂಗ್ಲೀಷ್ ಲೆಕ್ಚರರ್ ಇಲ್ಲಿಯವರೆಗೆ ಬರಲಿಲ್ಲ. ಓಪನ್ ಆದಾಗಿನಿಂದ ಇಲ್ಲಿಯವರೆಗೆ ಬರಲಿಲ್ಲ. ಕಾಮರ್ಸ್ ಸಬ್ಜೆಕ್ಟ್‌ಗೆ ಕರೆದಂತಹ ಆ ಜಾಗದಲ್ಲಿ ಕಳೆದ ವರ್ಷ ಲೆಕ್ಚರರ್ ಇಲ್ಲ ಎಂದು ಮೂರು ವರ್ಷ ಆಯಿತು. ವಿದ್ಯಾರ್ಥಿಗಳನ್ನು ಅಡ್ಮಿಟ್ ಮಾಡಿಕೊಳ್ಳುತ್ತಿಲ್ಲ. ಆ ಸಬ್ಜೆಕ್ಟೇ ನಿಂತು ಹೋಗಿದೆ. ಇದು ಮೂರನೆಯ ವರ್ಷ. ಈ ವರ್ಷವೂ ಲೆಕ್ಚರರ್ ಬರಲಿಲ್ಲ. ಸುಮಾರು 100 ಜನ ವಿದ್ಯಾರ್ಥಿಗಳು ಇದ್ದಾರೆ, ಆ ಸಬ್ಜೆಕ್ಟ್ ತೆಗೆದುಕೊಳ್ಳುತ್ತಿಲ್ಲ. ಅವರು ತೆಗೆದುಕೊಳ್ಳುತ್ತಿಲ್ಲ ಎಂದು ಹಾಗೆಯೇ ಹೇಳಿ ಕಳುಹಿಸುತ್ತಿದ್ದಾರೆ. ಅವರೇನೋ ಪಾಪ ಬೋರ್ಡಿಗೆ ಹಾಕಿ ಬಿಟ್ಟಿದ್ದಾರೆ, ಇಂತಿಂಥ ಸಬ್ಜೆಕ್ಟ್‌ಗೆ ಲೆಕ್ಚರರ್ಸ್ ಇಲ್ಲದೇ ಇರುವುದರಿಂದ ನೀವು ನಿಮ್ಮ ಹುಡುಗರನ್ನು ಸೇರಿಸಬೇಕಾದರೆ ಯೋಚನೆ ಮಾಡಿ ಎಂದು, ಅಪರಾಧ ಆಗಿರಬಹುದು. ಆದರೆ ಹಾಕದೇ ಇದ್ದರೂ ಕೂಡ ಆ ಪ್ರಿನ್ಸಿಪಾಲರ ಮೇಲೆ ಗಲಾಟೆ ಮಾಡುತ್ತಾರೆ. ಏಕೆ ತೆಗೆದುಕೊಳ್ಳುವುದಿಲ್ಲ? ಎಂದು ಹೇಳಿ ಅಲ್ಲಿ ಗೊಂದಲ ಉಂಟಾಗುತ್ತದೆ. ಅದನ್ನು ತಪ್ಪಿಸಿಕೊಳ್ಳುವುದಕ್ಕೋಸ್ಕರ ಒಂದು ಬೋರ್ಡ್ ಹಾಕಿರಬಹುದು. ಇದು ಎಲ್ಲಾ ಕಾಲಕ್ಕೂ ಇರತಕ್ಕ ಒಂದು ವಿಚಾರ. ದಯವಿಟ್ಟು ಗಲಾಟೆ ಮಾಡುವ ವಿಚಾರವಲ್ಲ. ಹಳ್ಳಿಯಲ್ಲಿ ಮಕ್ಕಳಿಗೆ ಪಾಠ ಹೇಳತಕ್ಕಂಥ ವ್ಯವಸ್ಥೆ ಸರಿ ಇಲ್ಲ.

ಅಧ್ಯಕ್ಷರು :- ಕೋಲಾರದಂತಹ ಕಡೆ ಕಾಲೇಜು ಎಂದರೆ ಇಂಪಾರ್ಟೆಂಟ್ ನಮಗೆ ಬೇರೆ ಏನೂ ಗತಿ ಇಲ್ಲ. ನೀವು ಶ್ರೀಮಂತರು ನಿಮಗೆ ಏನು ಓದು ಇಲ್ಲದೇ ಇದ್ದರೂ ಸಹ ಹಾಸನ ಜಿಲ್ಲೆಯಲ್ಲಿ ನಡೆಯುತ್ತದೆ.

ಶ್ರೀ ಬಿ. ಬಿ. ಶಿವಪ್ಪ :- ಆದರೆ ಶ್ರೀಮಂತರ ಮನೆಯಲ್ಲಿ ಕೆಲಸ ಮಾಡುವ ಮಕ್ಕಳು ಓದುತ್ತಾರಲ್ಲಾ. ಅವರಿಗೆ ಒಂದು ಜಾಗ ಬೇಕಲ್ಲಾ.

ಶ್ರೀ ಸಿ. ಆರ್. ಸಗೀರ್ ಅಹಮದ್ :- ಈ ಹಿಂದೆ ಕಾಲೇಜುಗಳಲ್ಲಿ ಅರೆ ಕಾಲಿಕ ಶಿಕ್ಷಕರನ್ನು ನೇಮಿಸಿಕೊಳ್ಳುವಂತಹ ಜವಾಬ್ದಾರಿ ಪ್ರಿನ್ಸಿಪಾಲರಿಗೆ ಅವಕಾಶ ಮಾಡಿ ಕೊಡುತ್ತಿದ್ದರು. ಈಗ ನೇರವಾಗಿ ಹಾಗೆ ನೇಮಿಸಿಕೊಳ್ಳಬಾರದು ಎಂದು ಸರ್ಕಾರದ ಆದೇಶ ಇದೆ. ನಿವೃತ್ತಿ ಹೊಂದಿರುವಂತಹ ಶಿಕ್ಷಕರನ್ನು ಸೇರಿಸಿಕೊಳ್ಳುವುದಕ್ಕೆ ಆದೇಶ ಕೊಟ್ಟಿದ್ದಾರೆ. ಯಾರು ಬರುತ್ತಾರೆ ಸ್ವಾಮಿ ವಿಲೇಜ್ ಲಿಮಿಟ್‌ನಲ್ಲಿ ನಿವೃತ್ತಿ ಹೊಂದಿರುವಂತಹ ಶಿಕ್ಷಕರು? ಆದಕ್ಕೆ ದಯಮಾಡಿ ಸರ್ಕಾರ ಉತ್ತರ ಕೊಡಬೇಕೆಂದು ಹೇಳಿ ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ :- ಕೊರತೆಯನ್ನು ನೀಗಿಸತಕ್ಕಂತಹ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 202 (970)

ವಿಷಯ :- ಬೆಂಗಳೂರಿನ ಇಂದಿರಾ ನಗರದಲ್ಲಿ ಮಹಿಳಾ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜು ಪ್ರಾರಂಭಿಸುವ ಬಗ್ಗೆ.

ಶ್ರೀ ಎನ್. ರಾಜಣ್ಣ (ಭಾರತೀನಗರ) :- ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದಲ್ಲಿ ಮಹಿಳೆಯರಿಗಾಗಿ ನಡೆಯುತ್ತಿರುವ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜುಗಳ ಸಂಖ್ಯೆ ಎಷ್ಟು?

ಆ) ಭಾರತೀನಗರ ವಿಧಾನ ಸಭಾ ಕ್ಷೇತ್ರದಲ್ಲಿ ಯಾವುದಾದರೂ ಸರ್ಕಾರಿ ಮಹಿಳಾ (ಕಲಾ ಮತ್ತು ವಿಜ್ಞಾನ) ಕಾಲೇಜು ಇದೆಯೇ;

ಇ) 1996-97 ನೇ ಸಾಲಿನಲ್ಲಿ ಇಂದಿರಾನಗರದಲ್ಲಿ ಸರ್ಕಾರಿ ಮಹಿಳಾ ಕಲಾ ಮತ್ತು ವಿಜ್ಞಾನ ಕಾಲೇಜನ್ನು ಸರ್ಕಾರ ಪ್ರಾರಂಭಿಸುವ ಪ್ರಸ್ತಾಪ ಇದೆಯೇ?

ಶ್ರೀ ಬಿ. ಸೋಮಶೇಖರ್ :-

ಅ) ಮೂರು.

ಆ) ಇಲ್ಲ.

ಇ) ಇಲ್ಲ.